ಪ್ರಸ್ತಾಪದ ನಾಂದಿ ಹಾಡಿ ಇಂದಿರಾ ತನ್ನ ಅಕ್ಕನ ಮಗ ಕಾರ್ತಿಗೆ ಮಲ್ಲಿಕಾಳ ಸಂಬಂಧ ಕುದುರಿಸಿದ್ದರು. ಅದೇ ಇಂದಿರಾ ತನ್ನ ಕಣ್ಣೆದುರೇ ನಾಲ್ಕೈದು ಕೋಟಿಯ ಆಸ್ತಿ ಕೈ ತಪ್ಪಿ ಹೋಗುತ್ತಿರುವುದನ್ನು ಹೇಗೆ ಸಹಿಸಿಕೊಂಡಾರು?

★★★

ಕಮಿಟಿ ಮೀಟಿಂಗಿನಲ್ಲಿ ಸದಸ್ಯರು ಅಪ್ಪನಿಗೆ ಅವಮಾನ ಮಾಡಿದ ವಿಷಯವನ್ನು ಸೆಕ್ಯುರಿಟಿಯವ ಮಲ್ಲಿಕಾಳಿಗೆ ಹೇಳಿದ. ಸಿಟ್ಟೆದ್ದ ಮಲ್ಲಿಕಾ ನೇರ ಇಂದಿರಾರ ಮನೆಗೆ ಹೋಗಿ ಬಾಗಿಲು ಬಡಿದು ತೆರೆದ ಇಂದಿರಾರನ್ನು ದುರುಗುಟ್ಟಿ ನೋಡಿ, ''ಬಾಯಿಗೆ ಬಂದಹಾಗೆಲ್ಲ ಒದರಬೇಡಿ. ನಮ್ಮಪ್ಪನ ಮಾನಕ್ಕೆ ಗೌರವ ಕೊಡಲಿಲ್ಲ ನೀವು. ಹೋಗಲಿ, ಗೌರಿ ಆಂಟಿಯ ಮಾನವನ್ನೂ ಹರಾಜು ಹಾಕಿದಿರಿ. ನಮ್ಮಪ್ಪ ಫ್ಲ್ಯಾಟು ಗೌರಿ ಆಂಟಿಯ ಹೆಸರಿಗೆ ಬರೆದು ಹಾಕ್ತಾರೆ ಎಂದು ಹೆದರಿಸಿದ್ದೇ ನೀವು. ಕಾರ್ತಿ ಒಬ್ಬ ಮೂರ್ಖ. ಒಬ್ಬ ಹೊಣೆಗೇಡಿ, ಸ್ವಂತ ದುಡಿದು ಆಸ್ತಿಪಾಸ್ತಿ ಮಾಡಲಾಗದಿದ್ದವ. ಮಾವನ ಆಸ್ತಿಗೆ ಜೊಲ್ಲು ಸುರಿಸುವ ನಾಯಿ. ಸ್ವಂತ ಮಾವನಿಗೇ ಹೆಣ್ಣಿನ ಹುಚ್ಚು ಎಂದವ. ಹೇಗಾದರೂ ಮಾವನ ಆಸ್ತಿಯನ್ನು ಕಬಳಿಸುವ ಪ್ಲಾನ್ ಹಾಕಿದವ. ಅವನ ಆಸ್ತಿಯ ಅರ್ಧವನ್ನು ನಾನು ಕೋರ್ಟಿನಲ್ಲಿ ಪರಿಹಾರವಾಗಿ ಕೇಳುತ್ತೇನೆ. ನೋಡುತ್ತಾ ಇರಿ. ನಾಲ್ಕು ದಿನಕ್ಕೆ ಗೌರಿ ನಮ್ಮ ಮನೆಗೆ ಬಂದರೆ ಅದಕ್ಕೆ ಹೆದರಿಕೊಂಡಿರಾ? ಅವರಿಬ್ಬರು ಒಂದೇ ಮನೆಯಲಿದ್ದರೆ ಅದು ಲಿವಿಂಗ್ ಟುಗೆದರ್ ಎಂದಿರಾ? ಕಷ್ಟಕಾಲದಲ್ಲಿ ಮಗಳನ್ನು ಸಂತೈಸಿ ಮನೆಗೆ ಕರೆತಂದರೆ ಅದೂ ನಿಮ್ಮ ಕಾಮಾಲೆ ಕಣ್ಣಿಗೆ ಘೋರ ಅನೈತಿಕ ಅಪರಾಧ ಅನ್ನಿಸುತ್ತದೆ ಅಲ್ವಾ? ಅಪ್ಪನಿಗೆ ತಲೆಕೆಟ್ಟಿದೆ, ಮಗಳೊಂದಿಗೆ ಮಲಗಲು ಹೊರಟಿದ್ದಾನೆ ಅಂತ ಕಂಪ್ಲೇಂಟ್ ಬರೆಸುತ್ತೀರಿ ಅಲ್ವಾ? ಯಾರಬಳಿ ಹೋಗಿ ಏನೇನು ಚಾಡಿ ಹೇಳಿ ಅರಚಿಕೊಂಡು ಬನ್ನಿ, ನಿಮ್ಮಿಂದ ಏನೂ ಮಾಡಲಿಕ್ಕಾಗುವುದಿಲ್ಲ. ನಾನೂ ಅಪ್ಪನೂ ಒಂದೇ ಮನೆಯಲ್ಲಿರುತ್ತೇವೆ. ಒಂದೇ ಬೆಡ್‌ರೂಮಿನಲ್ಲಿ ಮಲಗುತ್ತೇವೆಯೋ ನೋಡುವ ಕುತೂಹಲವಿದ್ದವರು ಬನ್ನಿ... ಕಿಟಿಕಿಯನ್ನು ತೆರೆದಿಡುತ್ತೇವೆ. ಇಡೀ ದಿನ ನಮ್ಮ ಮನೆಯ ಕಿಟಿಕಿಯಲ್ಲೇ ನಿಂತು ನಮ್ಮ ಮೇಲೆ ನಿಗಾ ಇಡಿ. ನಮ್ಮ ನಾಯಿ ಮಲಗುವಲ್ಲಿ ಜಾಗ ಮಾಡಿಕೊಡುತ್ತೇನೆ. ಅಲ್ಲೇ ಮಲಗಿ. ಅಲ್ಲಿಂದಲೇ ಇಣುಕಿನೋಡಿ... ತನಿಖೆ ಮಾಡಿ. ಸುದ್ದಿ ಮಾಡಿ. ಜಗತ್ತಿನ ಯಾವ ಕಾನೂನು ಕೂಡ ಅಪ್ಪ ಮಗಳು ಒಟ್ಟಿಗೆ ಬಾಳಬಾರದು ಎನ್ನುವುದಿಲ್ಲ. ಕೊಳೆತು ನಾರುವ ನಿಮ್ಮ ಬಗ್ಗೆ ಕನಿಕರವಾಗುತ್ತಿದೆ. ನಿಮ್ಮ ನಾಲಗೆ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ನಾವು ಅಪ್ಪಮಗಳು ಸುಖದಿಂದ ಇರುವುದನ್ನು ನೋಡಿ ಹೊಟ್ಟೆಕಿಚ್ಚಿನಿಂದ ಸಾಯಿರಿ'' ಎಂದು ಆರ್ಭಟಿಸುತ್ತಲೇ ಮನೆಗೆ ಹಿಂದಿರುಗಿ ಬಾಗಿಲು ಜಡಿದಿದ್ದಳು.

ಅವಳ ಆರ್ಭಟ, ಕಿರಿಚಾಟಗಳು ಇಡೀ ಬಿಲ್ಡಿಂಗಿನ ನಾಲ್ಕೂ ಕಾರಿಡಾರುಗಳಲ್ಲಿ ಬಹಳ ಹೊತ್ತಿನ ವರೆಗೆ ಅಲೆಅಲೆಯಾಗಿ ಪ್ರತಿಧ್ವನಿಸುತ್ತಲೇ ಇದ್ದವು.


## ಗೋಪೀನಾಥ ರಾವ್

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟಪಾಡಿ. ತಂದೆ ಪ್ರಸಿದ್ಧ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ತಾಯಿ ಮುತ್ತಮ್ಮ. ವೃತ್ತಿಯಲ್ಲಿ ಲೆಕ್ಕಪರಿಶೋಧಕ. ಪ್ರಸ್ತುತ ದುಬೈಯಲ್ಲಿ ಉದ್ಯೋಗ. 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?' ಅವರ ಪ್ರಕಟಿತ ಕಥಾಸಂಕಲನಗಳು.